

# ಮಿನುಗುವ ಮಣಿ ಮಾಲೆ

ದುಬಾರಿಯಲ್ಲದ ಬೀಡ್ಸ್ ಹಾರಗಳು ಉಡುಪಿಗೆ ಮ್ಯಾಚ್ ಮಾಡಬಹುದು. ವಿವಿಧ ಹರಳುಗಳನ್ನು ಮಾಲೆಗಳಾಗಿ ಪೋಣಿಸಿ ಧರಿಸಿದರೆ ಅದು ಚಂದಕ್ಕಿಂತ ಚಂದ.

**■ ಕೃಷ್ಣವೇಣಿ ಪ್ರಸಾದ್ ಮುಳಿಯ**

ಚಿತ್ರಕೃಪೆ: ಮುಳಿಯ ಕೇಶವ ಭಟ್ ಅಂಡ್ ಸನ್ಸ್



ಬೀಡ್ಸ್, ಹರಳು, ಮಣಿ ಸೌಂದರ್ಯದ ಆಗರ. ರಾಜರ ಕಾಲದಿಂದಲೇ ಇದು ಬಳಕೆಯಲ್ಲಿತ್ತು. ಜುಮ್ಕಾ, ಹ್ಯಾಂಗಿಂಗ್ ಓಲೆಗಳಲ್ಲಿ, ಮಕ್ಕಳ ಹಾರಗಳಲ್ಲಿ ದೃಷ್ಟಿ, ತಾಗದಂತೆ ಧರಿಸುವ ಹಾರಗಳಲ್ಲಿ ಹೇರಳವಾಗಿ ಇದನ್ನು ಬಳಸುತ್ತಾರೆ. ಅಷ್ಟೊಂದು ಬೇಡಿಕೆಯಿರುವ ವಸ್ತು ಇದಾಗಿದೆ. ಆಭರಣಕ್ಕೆ ಮೆರಗು ನೀಡುವುದರಲ್ಲಿ ಎತ್ತಿದ ಕೈ ಇದರದ್ದು.

ಹರಳು, ಬೀಡ್ಸ್ ಹಲವು ವಿಧ. ಅತಿ ದುಬಾರಿಯಾದ ನೈಸರ್ಗಿಕ ಮುತ್ತುಗಳೂ ಬರುತ್ತದೆ. ಮನುಷ್ಯ ಸೃಷ್ಟಿಸಿದ ಬೀಡ್ಸ್ ಕೂಡ ಇದೆ. ಇದನ್ನು ಕಲ್ಚರ್ಡ್ ಪರ್ಲ್ ಬೀಡ್ಸ್ ಎನ್ನುತ್ತಾರೆ. ಈ ಬೀಡ್ಸ್‌ಗಳು ದುಬಾರಿಯಾಗಿರುವುದಿಲ್ಲ ಎನ್ನುವುದು ಗಮನಿಸಬೇಕಾದ ವಿಷಯ. ಆದರೆ ಇದನ್ನು ಕುತ್ತಿಗೆಯಲ್ಲಿ ಶೋಭಿಸುವಂತೆ ಕಾಣಿಸುವುದು ಹೇಗೆ?

ಕೆಲವೊಂದು ಸೀರೆಗಳು ನೋಡಲು ಅಷ್ಟು ಸುಂದರವಾಗಿರದಿದ್ದರೂ ಉಟ್ಟಾಗ ಶೋಭಿಸುತ್ತದೆ. ಅದು ಹೇಗೆ? ಸೀರೆಗೆ ಕುಚ್ಚು, ಫಾಲ್ ಹಾಕಿದಾಗ ಅದು ತನ್ನ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುತ್ತದೆ. ಅದೇ ರೀತಿ ಬೀಡ್ಸ್‌ಗಳಲ್ಲೂ ಅಷ್ಟೆ, ಬೀಡ್ಸ್‌ಗೆ ಹೊಂದುವ ನೂಲಿನಿಂದ ಪೋಣಿಸಬೇಕು. ಅದರಲ್ಲೂ ಕೆಲವೊಂದು ಬೀಡ್ಸ್‌ಗಳಿಗೆ ಕಾಂಟ್ರಾಸ್ಟ್ ನೂಲನ್ನು ಬಳಸಬಹುದು. ಆಗ ಅದು ಇನ್ನೂ ಎದ್ದು ಕಾಣುತ್ತದೆ. ಇನ್ನೂ ಕೆಲವೊಂದಕ್ಕೆ ಅದೇ ಬಣ್ಣದ ನೂಲನ್ನು ಬಳಸಬಹುದು. ಆದರೆ ಹಿಂಬದಿಯವರೆಗೂ ಅದೇ ನೂಲು ಇದ್ದು ಕುಚ್ಚು ಇರಬೇಕು.

ಬೀಡ್ಸ್ ಹೆಣೆಯಲು ಒಳಗೆ ಗಟ್ಟಿಯಾದ ಬೆಳ್ಳಿಯ ಬಣ್ಣದ ಪ್ಲಾಸ್ಟಿಕ್ ತಂತಿಯನ್ನು ಬಳಸುವುದಿದ್ದರೆ ಆದಷ್ಟು ಸ್ಟ್ರಿಂಗ್ ಕಾಣದಂತೆ ಒಂದರ ಹತ್ತಿರವೇ ಇನ್ನೊಂದು ಬೀಡ್ಸ್ ಬರುವಂತೆ ಪೋಣಿಸಿ ಹಿಂಬದಿ ಕುಚ್ಚು ಹಾಕಿಕೊಳ್ಳಬಹುದು. ಒಂದು ಮಣಿ ಒಂದು ನೂಲಿನ ಗಂಟು ಹಾಕಿದ ಮಾಲೆಯೂ ಬಹು ಅದ್ಭುತವಾಗಿ ಕಾಣುತ್ತದೆ. ಏಕೆಂದರೆ ಇದು ಬಳುಕುವುದರಿಂದ ಕುತ್ತಿಗೆಯಲ್ಲಿ ಸೊಗಸಾಗಿ ಕೂತು ಅಂದವಾಗಿರುತ್ತದೆ. ಮಣಿಗಳನ್ನು ಅಳವಡಿಸಿದಾಗ ದೊಡ್ಡ ಮಣಿಗಳು ಮಧ್ಯಭಾಗದಲ್ಲಿದ್ದು ಚಿಕ್ಕಮಣಿಗಳು ಒಂದರ ಅನಂತರ ಒಂದು ಇದ್ದು ಹಿಂಬದಿ ಚಿಕ್ಕ ಮಣಿಗಳನ್ನು ಅಳವಡಿಸಬೇಕು. ಕುತ್ತಿಗೆಯ ಎದುರು ಮಧ್ಯಭಾಗ ದೊಡ್ಡ ಒಂದು ಮಣಿ ಇಟ್ಟಾಗ ಅದು ಒಂದು ತೆರನಾಗಿ ಸುಂದರವಾಗಿರುತ್ತದೆ. ಬಂಗಾರದ, ಬೆಳ್ಳಿಯ ಪದಕಗಳನ್ನು ಈ ಹಾರದಲ್ಲಿ ಮಧ್ಯಭಾಗಕ್ಕೆ ಅಳವಡಿಸಬೇಕಾದರೆ ಪದಕದಲ್ಲಿ ಹುಕ್ ಇರಬೇಕು. ಆಗ ಸೊಗಸಾಗಿ ಜೋಡಿಸಬಹುದು.

ಹರಳುಗಳಲ್ಲಿ ಹೊರಗೆ ಕೆತ್ತನೆ ಇರುವುದು ಹೊಳಪನ್ನು ನೀಡುತ್ತದೆ. ಇನ್ನು ಕೆಲವು ಹೊಳಪನ್ನು ನೀಡದಿದ್ದರೂ ನೋಟ ಚೆನ್ನಾಗಿರುತ್ತದೆ. ಚಿಕ್ಕದಾದ ಹರಳುಗಳನ್ನು 4–5 ಮಾಲೆಗಳಾಗಿ ಪೋಣಿಸಿ ಹಾಕಿಕೊಂಡಾಗ ಸುಂದರವಾಗಿರುತ್ತದೆ. ಇದನ್ನು ಗಾಂಚು ವಿನ್ಯಾಸದಲ್ಲಿ ಚೆನ್ನದಲ್ಲಿ ಪೋಣಿಸಿದಾಗ ಒಳ್ಳೆಯ ನೋಟ ಬರುತ್ತದೆ. ಅಲ್ಲದೆ ಕತ್ತಿಗೆಯಲ್ಲಿ ಎದ್ದು ಕಾಣುತ್ತದೆ. ದೊಡ್ಡ ಬೀಡ್ಸ್‌ನ ಒಂದು ಎಳೆಯನ್ನು ಹಾಕಿಕೊಂಡಾಗ ಶೋಭೆ. ಏಕೆಂದರೆ ತುಂಬ ಎಳೆಯ ಹಾರವನ್ನು ಹಾಕಿದರೆ ಕುತ್ತಿಗೆ ಭಾರವೂ ಆಗುತ್ತದೆ ನಮ್ಮ ಶರೀರದಲ್ಲಿ ಹಾರವೇ ಕಾಣುತ್ತದೆ. ಆಭರಣ